# ಬ್ಯಾಂಕರ್ ಪುಸ್ತಕ ಸಾಕ್ಷ್ಯ ಅಧಿನಿಯಮ, 1891

(1891ರ ಅಧಿನಿಯಮ ಸಂಖ್ಯೆ 18)

**[02-11-2004 ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 30 ನೇ ಸಂಪುಟದ 1 ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 9 ರಿಂದ 12 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**


1. ಹೆಸರು ಮತ್ತು ವ್ಯಾಪ್ತಿ

2. ಪರಿಭಾಷೆಗಳು

2ಎ. ಪ್ರಿಂಟ್ಔಟ್‌ಗಳಿಗೆ ಸಂಬಂಧಿಸಿದ ಷರತ್ತುಗಳು

3. ಅಧಿನಿಯಮದ ಉಪಬಂಧಗಳನ್ನು ವಿಸ್ತರಿಸಲು ಅಧಿಕಾರ

4. ಬ್ಯಾಂಕರ್ ಪುಸ್ತಕಗಳಲ್ಲಿನ ನಮೂದುಗಳ ರುಜುವಾತಿನ ವಿಧಾನ

5. ಪುಸ್ತಕಗಳನ್ನು ಹಾಜರುಪಡಿಸುವಂತೆ ಬ್ಯಾಂಕಿನ ಅಧಿಕಾರಿಯನ್ನು ಒತ್ತಾಯಪಡಿಸದಿರುವ ಸಂದರ್ಭ

6. ನ್ಯಾಯಾಲಯದ ಅಥವಾ ನ್ಯಾಯಾಧೀಶನ ಆದೇಶದ ಮೂಲಕ ಪುಸ್ತಕಗಳ ಪರಿಶೀಲನೆ

7. ಖರ್ಚುಗಳು

8. ನ್ಯಾಯಾಲಯದ ಆದೇಶವನ್ನು, ನಿರ್ದಿಷ್ಟಪಡಿಸಿದ ಅಧಿಕಾರಿಯು ಮಾಡಿದ ಆದೇಶವೆಂಬುದಾಗಿ ಅರ್ಥೈಸುವುದು.

# ಬ್ಯಾಂಕರ್ ಪುಸ್ತಕ ಸಾಕ್ಷ್ಯ ಅಧಿನಿಯಮ, 1891

(1891ರ ಅಧಿನಿಯಮ ಸಂಖ್ಯೆ 18)

[1ನೇ ಅಕ್ಟೋಬರ್, 1891]

ಬ್ಯಾಂಕರ್ ಪುಸ್ತಕಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯ ಕಾನೂನನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಬ್ಯಾಂಕರ್ ಪುಸ್ತಕಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯ ಕಾನೂನನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

**1. ಹೆಸರು ಮತ್ತು ವ್ಯಾಪ್ತಿ.**- (1) ಈ ಅಧಿನಿಯಮವನ್ನು ಬ್ಯಾಂಕರ್ ಪುಸ್ತಕ ಸಾಕ್ಷ್ಯ ಅಧಿನಿಯಮ, 1891 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(1) "ಕಂಪನಿ" ಎಂದರೆ ಕಂಪನಿಗಳ ಅಧಿನಿಯಮ, 1956 (1956ರ 1)ರ 3ನೇ ಪ್ರಕರಣದಲ್ಲಿ ಪರಿಭಾಷಿಸಲಾದ ಯಾವುದೇ ಕಂಪನಿ ಮತ್ತು ಅದರಲ್ಲಿ ಆ ಅಧಿನಿಯಮದ 591ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ವಿದೇಶಿ ಕಂಪನಿಯೂ ಸೇರುತ್ತದೆ;

(1ಎ)"ನಿಗಮ" ಎಂದರೆ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ನಿಗಮಿತ ನಿಕಾಯ ಮತ್ತು ಅದರಲ್ಲಿ ಭಾರತ ರಿಸರ್ವ್ ಬ್ಯಾಂಕ್, ಭಾರತ ಸ್ಟೇಟ್ ಬ್ಯಾಂಕ್ ಮತ್ತು ಭಾರತ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕ್) ಅಧಿನಿಯಮ, 1959 (1959ರ 38) ರಲ್ಲಿ ಪರಿಭಾಷಿಸಿರುವಂಥ ಯಾವುದೇ ಸಹಾಯಕ ಬ್ಯಾಂಕ್ ಸಹ ಸೇರುತ್ತದೆ;

(2) "ಬ್ಯಾಂಕ್" ಮತ್ತು "ಬ್ಯಾಂಕರ್" ಎಂದರೆ-,

(ಎ) ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತಿರುವ ಯಾವುದೇ ಕಂಪನಿ ಅಥವಾ ನಿಗಮ;

(ಬಿ) ಈ ಅಧಿನಿಯಮದ ಉಪಬಂಧಗಳನ್ನು ಯಾವ ಪಾಲುಗಾರಿಕೆಯ ಅಥವಾ ವ್ಯಕ್ತಿಯ ಪುಸ್ತಕಗಳಿಗೆ ಇಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ ವ್ಯಾಪ್ತಗೊಳಿಸತಕ್ಕದ್ದೋ ಅಂಥ ಯಾವುದೇ ಪಾಲುಗಾರಿಕೆ ಅಥವಾ ವ್ಯಕ್ತಿ;

(ಸಿ) ಯಾವುದೇ ಅಂಚೆ ಕಚೇರಿ ಉಳಿತಾಯ ಬ್ಯಾಂಕು ಅಥವಾ ಮನಿ ಆರ್ಡರ್ ಕಚೇರಿ;

(3) "ಬ್ಯಾಂಕರ್ ಪುಸ್ತಕಗಳು" ಎಂಬುದರಲ್ಲಿ ಲೆಡ್ಜರ್‌ಗಳು, ದಿನ-ಪುಸ್ತಕಗಳು, ನಗದು ಪುಸ್ತಕಗಳು, ಲೆಕ್ಕ ಪುಸ್ತಕಗಳು ಮತ್ತು ಲಿಖಿತ ರೂಪದಲ್ಲಾಗಲಿ ಅಥವಾ ಮೈಕ್ರೋಫಿಲ್ಮ್, ಕಾಂತೀಯ ಟೇಪ್‌ಗಳಲ್ಲಿ ಸಂಗ್ರಹಿಸಿದ ರೂಪದಲ್ಲಾಗಲೀ ಅಥವಾ ಯಂತ್ರದ ಅಥವಾ ಬ್ಯಾಕ್‌ಅಪ್ ಅಥವಾ ಡಿಸಾಸ್ಟರ್ ರಿಕವರಿ ಸೈಟ್ ಎರಡನ್ನೂ ಒಳಗೊಂಡ ಆನ್‌ಸೈಟ್ ಅಥವಾ ಯಾವುದೇ ಆಫ್‌ಸೈಟ್ ಸ್ಥಳದಲ್ಲಿ ವಿದ್ಯುನ್ಮಾನ ಅಂಕಿಅಂಶ ಹಿಂಪಡೆಯುವಿಕೆ ಸಾಧನದ ಯಾವುದೇ ಇತರ ರೂಪದಲ್ಲಾಗಲೀ ಇಟ್ಟಿರುವ ಬ್ಯಾಂಕಿನ ಸಾಮಾನ್ಯ ವ್ಯವಹಾರಗಳಲ್ಲಿ ಬಳಸುವ ಎಲ್ಲಾ ಇತರ ಪುಸ್ತಕಗಳು ಒಳಗೊಳ್ಳುತ್ತವೆ;

(4) "ಕಾನೂನು ವ್ಯವಹರಣೆ" ಎಂದರೆ,-

(i) ಯಾವ ವ್ಯವಹರಣೆ ಅಥವಾ ವಿಚಾರಣೆಯಲ್ಲಿ ಸಾಕ್ಷ್ಯ ನೀಡಲಾಗಿದೆಯೋ ಅಥವಾ ನೀಡಬಹುದಾಗಿದೆಯೋ ಅಂಥ ಯಾವುದೇ ವ್ಯವಹರಣೆ ಅಥವಾ ವಿಚಾರಣೆ;

(ii) ಮಧ್ಯಸ್ಥಿಕೆ; ಮತ್ತು

(iii) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಸಾಕ್ಷ್ಯದ ಸಂಗ್ರಹಣೆಗಾಗಿ ಪೊಲೀಸ್ ಅಧಿಕಾರಿಯು ಅಥವಾ ಮ್ಯಾಜಿಸ್ಟ್ರೇಟನು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಈ ಸಂಬಂಧದಲ್ಲಿ ಅಧಿಕೃತನಾದ ಯಾರೇ ಇತರೆ ವ್ಯಕ್ತಿಯು (ಮ್ಯಾಜಿಸ್ಟ್ರೇಟ್‌ನಲ್ಲದ) ನಡೆಸುವ ಯಾವುದೇ ತನಿಖೆ ಅಥವಾ ವಿಚಾರಣೆ;

(5) "ನ್ಯಾಯಾಲಯ" ಎಂದರೆ ಯಾವ ವ್ಯಕ್ತಿ ಅಥವಾ ವ್ಯಕ್ತಿಗಳ ಮುಂದೆ ಕಾನೂನು ವ್ಯವಹರಣೆಯನ್ನು ನಡೆಸಲಾಗುವುದೋ ಅಥವಾ ಜರುಗಿಸಲಾಗುವುದೋ ಆ ವ್ಯಕ್ತಿ ಅಥವಾ ವ್ಯಕ್ತಿಗಳು;

(6) "ನ್ಯಾಯಾಧೀಶ" ಎಂದರೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶ;

(7) "ಅಧಿವಿಚಾರಣೆ" ಎಂದರೆ ಉಚ್ಚ ನ್ಯಾಯಾಲಯದ ಮುಂದೆ ಸಾಕ್ಷ್ಯವಾಗಿ ತೆಗೆದುಕೊಳ್ಳುವ ಯಾವುದೇ ಸುನಾವಣೆ; ಮತ್ತು

(8) "ಪ್ರಮಾಣಿತ ಪ್ರತಿ" ಎಂದರೆ,

(ಎ) ಒಂದು ಬ್ಯಾಂಕಿನ ಪುಸ್ತಕಗಳನ್ನು ಲಿಖಿತ ರೂಪದಲ್ಲಿ ಇಟ್ಟುಕೊಂಡು ಬಂದಿರುವಾಗ, ಅಂಥ ಪುಸ್ತಕಗಳಲ್ಲಿನ ಯಾವುದೇ ನಮೂದಿನ ಒಂದು ಪ್ರತಿಯ ಕೆಳಭಾಗದಲ್ಲಿ, ಅದು ಅಂಥ ನಮೂದಿನ ಯಥಾ ಪ್ರತಿಯಾಗಿದೆಯೆಂದು ಮತ್ತು ಅಂಥ ಪ್ರತಿಯು ಬ್ಯಾಂಕಿನ ಸಾಮಾನ್ಯ ಪುಸ್ತಕಗಳ ಪೈಕಿ ಒಂದು ಪುಸ್ತಕದಲ್ಲಿದೆಯೆಂದು ಮತ್ತು ಆ ನಮೂದನ್ನು ವ್ಯವಹಾರದ ವಾಡಿಕೆಯ ಮತ್ತು ಸಾಮಾನ್ಯ ಕ್ರಮದಲ್ಲಿ ಮಾಡಲಾಗಿತ್ತೆಂದು ಮತ್ತು ಅಂಥ ಪುಸ್ತಕವು ಇನ್ನೂ ಬ್ಯಾಂಕಿನ ಅಭಿರಕ್ಷೆಯಲ್ಲಿದೆಯೆಂದು ಬರೆದಿರುವ ಪ್ರಮಾಣಪತ್ರದ ಸಹಿತ ಮತ್ತು ಆ ಪ್ರತಿಯನ್ನು ಯಂತ್ರದಿಂದ ಅಥವಾ ಇತರ ವಿಧಾನದಿಂದ ಪಡೆಯಲಾಗಿದ್ದು ಅದೇ ಆ ಪ್ರತಿಯ ನಿಷ್ಕೃಷ್ಟತೆಯನ್ನು ಖಚಿತಪಡಿಸುವಂತಿರುವಲ್ಲಿ, ಆ ಬಗ್ಗೆ ಮತ್ತೊಂದು ಪ್ರಮಾಣಪತ್ರದ ಸಹಿತ, ಆದರೆ ಅಂಥ ಪ್ರತಿಯನ್ನು ಯಾವ ಪುಸ್ತಕದಿಂದ ತಯಾರಿಸಲಾಯಿತೋ ಆ ಪುಸ್ತಕವನ್ನು, ಪ್ರತಿಯನ್ನು ಹಾಗೆ ತಯಾರಿಸಿದ ದಿನಾಂಕದ ತರುವಾಯ ಬ್ಯಾಂಕ್ ವ್ಯವಹಾರದ ವಾಡಿಕೆಯ ಕ್ರಮದಲ್ಲಿ ನಾಶಪಡಿಸಿರುವಲ್ಲಿ, ಆ ಬಗ್ಗೆ ಇನ್ನೂ ಒಂದು ಪ್ರಮಾಣಪತ್ರದ ಸಹಿತ ಇರುವಂಥ ಪ್ರತಿ. ಅಂಥ ಪ್ರತಿಯೊಂದು ಪ್ರಮಾಣಪತ್ರಕ್ಕೆ ಬ್ಯಾಂಕಿನ ಪ್ರಧಾನ ಲೆಕ್ಕಿಗನು ಅಥವಾ ವ್ಯವಸ್ಥಾಪಕನು ತನ್ನ ಹೆಸರು ಮತ್ತು ಪದನಾಮದೊಂದಿಗೆ ಸಹಿ ಮತ್ತು ದಿನಾಂಕವನ್ನು ಹಾಕಿರಬೇಕು; ಮತ್ತು

(ಬಿ) ಬ್ಯಾಂಕಿನ ಪುಸ್ತಕಗಳಲ್ಲಿ ಫ್ಲಾಪಿ, ಡಿಸ್ಕ್, ಟೇಪ್ ಅಥವಾ ಯಾವುದೇ ಇತರ ವಿದ್ಯುತ್ಕಾಂತೀಯ ಅಂಕಿಅಂಶ ಸಂಗ್ರಹಣಾ ಸಾಧನದಲ್ಲಿ ಸಂಗ್ರಹಿಸಲಾದ ಅಂಕಿಅಂಶಗಳ ಪ್ರಿಂಟ್‌ಔಟ್‌ಗಳು ಇರುವಾಗ, 2ಎ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಪ್ರಮಾಣೀಕರಿಸಿದಂಥ ಹೇಳಿಕೆಗಳ ಸಹಿತ ಇರುವ ಅಂಥ ನಮೂದಿನ ಪ್ರಿಂಟ್‌ಔಟ್ ಅಥವಾ ಪ್ರಿಂಟ್‌ಔಟಿನ ಪ್ರತಿ;

(ಸಿ) ಬ್ಯಾಂಕಿನ ಪುಸ್ತಕಗಳಲ್ಲಿ, ಮೈಕ್ರೊ ಫಿಲ್ಮ್, ಕಾಂತೀಯ ಟೇಪ್‌ಗಳಲ್ಲಿ ಸಂಗ್ರಹಿಸಿದ ಅಥವಾ ಯಂತ್ರದ ಅಥವಾ ಇತರ ಯಾವುದೇ ವಿಧಾನದಲ್ಲಿ ಯಂತ್ರದ ಅಥವಾ ವಿದ್ಯುನ್ಮಾನ ಅಂಕಿಅಂಶ ಹಿಂಪಡೆಯುವಿಕೆ ಸಾಧನದ ಯಾವುದೇ ಇತರ ರೂಪದಲ್ಲಾಗಲೀ ಪಡೆದ ಯಾವುದೇ ನಮೂದನೆಯ ಪ್ರಿಂಟ್‌ಔಟ್‌ಗಳು ಇರುವಾಗ, ಅಂಥ ಪ್ರಿಂಟ್‌ಔಟ್ ಅಂಥ ನಮೂದನೆಯ ಪ್ರತಿ ಎಂಬುದಾಗಿ ನಿಷ್ಕೃಷ್ಟತೆಯನ್ನು

ಖಚಿತಪಡಿಸಿರುವಲ್ಲಿ ಮತ್ತು 2ಎ ಪ್ರಕರಣದ ಉಪಬಂಧಗಳಿಗನುಸಾರವಾಗಿ ಪ್ರಮಾಣ ಪತ್ರವನ್ನು ಒಳಗೊಂಡಿರುವಂಥ ಒಂದು ಪ್ರಿಂಟ್‌ಔಟ್.

**2ಎ. ಪ್ರಿಂಟ್‌ಔಟ್‌ಗಳಿಗೆ ಸಂಬಂಧಿಸಿದ ಷರತ್ತುಗಳು.–** 2ನೇ ಪ್ರಕರಣದ (8)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ನಮೂದಿನ ಪ್ರಿಂಟ್‌–ಔಟ್‌ನ ಅಥವಾ ಪ್ರಿಂಟ್‌ಔಟ್‌ನ ಪ್ರತಿಯ ಜೊತೆಗೆ ಈ ಮುಂದಿನವುಗಳು ಇರತಕ್ಕದ್ದು, ಎಂದರೆ,–

(ಎ) ಅದು ಅಂಥ ನಮೂದಿನ ಪ್ರಿಂಟ್‌ಔಟ್ ಎಂಬ ಅಥವಾ ಅಂಥ ಪ್ರಿಂಟ್‌ಔಟಿನ ಪ್ರತಿ ಎಂಬ ಬಗ್ಗೆ ಪ್ರಧಾನ ಲೆಕ್ಕಿಗ ಅಥವಾ ಶಾಖಾ ವ್ಯವಸ್ಥಾಪಕನ ಪ್ರಮಾಣಪತ್ರ; ಮತ್ತು

(ಬಿ) ಗಣಕ ಯಂತ್ರ ವ್ಯವಸ್ಥೆಯ ಸಂಕ್ಷಿಪ್ತ ವಿವರಣೆಯ ಬಗ್ಗೆ ಮತ್ತು ಈ ಕೆಳಕಂಡವುಗಳ ವಿವರಗಳ ಬಗ್ಗೆ ಗಣಕ ಯಂತ್ರ ವ್ಯವಸ್ಥೆಯ ಪ್ರಭಾರದಲ್ಲಿರುವ ವ್ಯಕ್ತಿಯ ಪ್ರಮಾಣಪತ್ರ –

(ಎ) ಅಧಿಕೃತ ವ್ಯಕ್ತಿಗಳು ಮಾತ್ರವೇ ಅಂಕಿಅಂಶಗಳನ್ನು ಗಣಕಯಂತ್ರಕ್ಕೆ ಅಳವಡಿಸಿದ್ದಾರೆಂಬುದನ್ನು ಅಥವಾ ಯಾವುದೇ ಇತರ ನಿರ್ವಹಣೆ ಮಾಡಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳಲು ಗಣಕಯಂತ್ರ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡ ಸುರಕ್ಷಾ ಕ್ರಮಗಳು;

(ಬಿ) ಅಂಕಿಅಂಶಗಳನ್ನು ಅಧಿಕೃತವಾಗಿ ಬದಲಾಯಿಸುವುದನ್ನು ತಡೆಯಲು ಮತ್ತು ಪತ್ತೆಹಚ್ಚಲು ಅಳವಡಿಸಿಕೊಂಡ ಸುರಕ್ಷಾ ಕ್ರಮಗಳು;

(ಸಿ) ಗಣಕಯಂತ್ರ ಸಿಸ್ಟಂನ ವಿಫಲತೆಯಿಂದಾಗಿ ಅಥವಾ ಯಾವುದೇ ಇತರ ಕಾರಣಗಳಿಂದಾಗಿ ಕಳೆದುಹೋದ ಅಂಕಿಅಂಶಗಳನ್ನು ಮತ್ತೆ ಪಡೆದುಕೊಳ್ಳಲು ಲಭ್ಯವಿರುವ ಸುರಕ್ಷಾ ಕ್ರಮಗಳು;

(ಡಿ) ಫ್ಲಾಪಿ, ಡಿಸ್ಕ್, ಟೇಪ್ ಅಥವಾ ಇತರ ವಿದ್ಯುತ್ಕಾಂತೀಯ ಅಂಕಿಅಂಶ ಸಂಗ್ರಹಣಾ ಸಾಧನಗಳಂಥ ಹಾಕಿ ತೆಗೆಯಬಹುದಾದ ಮಾಧ್ಯಮಗಳಿಗೆ ಗಣಕಯಂತ್ರ ಸಿಸ್ಟಂನಿಂದ ಅಂಕಿಅಂಶಗಳನ್ನು ವರ್ಗಾಯಿಸುವ ರೀತಿ;

(ಇ) ಅಂಥ ಹಾಕಿ ತೆಗೆಯಬಹುದಾದ ಮಾಧ್ಯಮಕ್ಕೆ ಅಂಕಿಅಂಶಗಳನ್ನು ಸರಿಯಾಗಿ ವರ್ಗಾಯಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪರಿಶೀಲನೆ ಮಾಡುವ ವಿಧಾನ;

(ಎಫ್) ಅಂಥ ಅಂಕಿಅಂಶಗಳ ಸಂಗ್ರಹಣಾ ಸಾಧನಗಳನ್ನು ಗುರುತಿಸುವ ವಿಧಾನ;

(ಜಿ) ಅಂಥ ಸಂಗ್ರಹಣಾ ಸಾಧನಗಳ ಸಂಗ್ರಹಣೆಗಾಗಿ ಮತ್ತು ಅಭಿರಕ್ಷೆಗಾಗಿ ಮಾಡಿರುವ ವ್ಯವಸ್ಥೆಗಳು;

(ಎಚ್) ಗಣಕಯಂತ್ರ ಸಿಸ್ಟಂನಲ್ಲಿ ಯಾವುದೇ ಬಗೆಯಲ್ಲಿ ಅಕ್ರಮವಾಗಿ ತಿದ್ದುವುದನ್ನು ತಡೆಯಲು ಮತ್ತು ಕಂಡುಹಿಡಿಯಲು ಸುರಕ್ಷಾ ಕ್ರಮಗಳು; ಮತ್ತು

(ಐ) ಗಣಕಯಂತ್ರ ಸಿಸ್ಟಂನ ವಿಶ್ವಾಸನೀಯತೆಯನ್ನು ಮತ್ತು ಕರಾರುವಾಕ್ಕಾಗಿರುವುದನ್ನು ದೃಢಪಡಿಸುವ ಯಾವುದೇ ಇತರ ವಾಸ್ತವಾಂಶ;

(ಸಿ) ಗಣಕಯಂತ್ರ ಸಿಸ್ಟಂನ ಪ್ರಭಾರದಲ್ಲಿರುವ ವ್ಯಕ್ತಿಯು, ತಾನು ತಿಳಿದಿರುವಷ್ಟು ಮತ್ತು ನಂಬುವಷ್ಟುಮಟ್ಟಿಗೆ, ಅಂಥ ಗಣಕಯಂತ್ರ ಸಿಸ್ಟಂ ನಿರ್ದಿಷ್ಟ ಸಮಯದಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಿತ್ತೆಂದು, ಎಲ್ಲ ಸುಸಂಬದ್ಧ ಅಂಕಿಅಂಶಗಳನ್ನು ತನಗೆ ಒದಗಿಸಲಾಗಿತ್ತೆಂದು ಮತ್ತು ಆ ಪ್ರಿಂಟ್‌ಔಟ್ ಸುಸಂಗತ ಅಂಕಿಅಂಶಗಳನ್ನು ಸರಿಯಾಗಿ ಪ್ರತಿಬಿಂಬಿಸುತ್ತದೆಂದು ಅಥವಾ ಅದನ್ನು ಅವುಗಳಿಂದ ಯುಕ್ತ ರೀತಿಯಲ್ಲಿ ತೆಗೆಯಲಾಗಿದೆಯೆಂಬ ಬಗ್ಗೆ ಇನ್ನೊಂದು ಪ್ರಮಾಣಪತ್ರ.

**3. ಅಧಿನಿಯಮದ ಉಪಬಂಧಗಳನ್ನು ವಿಸ್ತರಿಸಲು ಅಧಿಕಾರ.–** ರಾಜ್ಯ ಸರ್ಕಾರವು, ಕಾಲಕಾಲಕ್ಕೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತನ್ನ ಆಡಳಿತಕ್ಕೊಳಪಟ್ಟಿರುವ ಕ್ಷೇತ್ರದೊಳಗೆ ಬ್ಯಾಂಕರುಗಳ ವ್ಯವಹಾರ ನಡೆಸುವ ಮತ್ತು ಕನಿಷ್ಠ ಪಕ್ಷ ಮೂರಕ್ಕಿಂತ ಕಡಿಮೆ ಇಲ್ಲದಷ್ಟು ಸಾಮಾನ್ಯ ಲೆಕ್ಕ ಪುಸ್ತಕಗಳ,

ಅಂದರೆ ನಗದು ಪುಸ್ತಕ, ದಿನ ಪುಸ್ತಕ ಅಥವಾ ಜರ್ನಲ್ ಮತ್ತು ಲೆಡ್ಜರುಗಳ ಕಟ್ಟನ್ನು ಇಟ್ಟಿರುವ ಯಾವುದೇ ಪಾಲುಗಾರಿಕೆಯ ಅಥವಾ ಯಾರೇ ವ್ಯಕ್ತಿಯ ಪುಸ್ತಕಗಳಿಗೆ ಈ ಅಧಿನಿಯಮದ ಉಪಬಂಧಗಳನ್ನು ವಿಸ್ತರಿಸಬಹುದು ಮತ್ತು ಅದೇ ರೀತಿಯಲ್ಲಿ ಅಂಥ ಯಾವುದೇ ಅಧಿಸೂಚನೆಯನ್ನು ರದ್ದುಪಡಿಸಬಹುದು.

**4. ಬ್ಯಾಂಕರ್ ಪುಸ್ತಕಗಳಲ್ಲಿನ ನಮೂದುಗಳ ರುಜುವಾತಿನ ವಿಧಾನ.**– ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಬ್ಯಾಂಕರ್ ಪುಸ್ತಕಗಳಲ್ಲಿ ಮಾಡಿರುವ ಯಾವುದೇ ನಮೂದಿನ ಪ್ರಮಾಣಿತ ಪ್ರತಿಯನ್ನು, ಅದರಲ್ಲಿ ಅಂಥ ನಮೂದು ಇದೆಯೆಂಬ ಬಗ್ಗೆ ಮೊದಲ ನೋಟದ ಸಾಕ್ಷ್ಯವಾಗಿ ಎಲ್ಲ ಕಾನೂನು ವ್ಯವಹರಣೆಗಳಲ್ಲಿ ಸ್ವೀಕರಿಸತಕ್ಕದ್ದು ಮತ್ತು ಮೂಲ ನಮೂದೇ ಈಗ ಕಾನೂನಿನ ಮೂಲಕ ಅಂಗೀಕಾರಾರ್ಹವಾಗಿರುವಾಗ ಮತ್ತು ಅಷ್ಟರಮಟ್ಟಿಗೆ, ಪ್ರತಿಯೊಂದು ಸಂದರ್ಭದಲ್ಲಿ ಅದರಲ್ಲಿ ದಾಖಲಾದ ವಿಷಯಗಳ, ವ್ಯವಹಾರಗಳ ಮತ್ತು ಲೆಕ್ಕಗಳ ಸಾಕ್ಷ್ಯವಾಗಿ ಅದನ್ನು ಅಂಗೀಕರಿಸತಕ್ಕದ್ದು, ಆದರೆ ಅದಕ್ಕಿಂತ ಹೆಚ್ಚಾಗಿ ಅಥವಾ ಬೇರೆ ರೀತಿಯಲ್ಲಿ ಅದು ಅಂಗೀಕಾರಾರ್ಹವಾಗತಕ್ಕದ್ದಲ್ಲ.

**5. ಪುಸ್ತಕಗಳನ್ನು ಹಾಜರುಪಡಿಸುವಂತೆ ಬ್ಯಾಂಕಿನ ಅಧಿಕಾರಿಯನ್ನು ಒತ್ತಾಯಪಡಿಸದಿರುವ ಸಂದರ್ಭ.**– ವಿಶೇಷ ಕಾರಣಕ್ಕಾಗಿ ನ್ಯಾಯಾಲಯವು ಅಥವಾ ನ್ಯಾಯಾಧೀಶನು ಮಾಡಿದ ಆದೇಶದ ಮೂಲಕ ಹೊರತು, ಬ್ಯಾಂಕು ಪಕ್ಷವಾಗಿರದ ಯಾವುದೇ ಕಾನೂನು ವ್ಯವಹರಣೆಯಲ್ಲಿ, ಬ್ಯಾಂಕರರ ಯಾವ ಪುಸ್ತಕಗಳ ಒಳಾಂಶಗಳನ್ನು ಈ ಅಧಿನಿಯಮದ ಮೇರೆಗೆ ರುಜುವಾತುಪಡಿಸಬಹುದೋ ಅಂಥ ಯಾವುದೇ ಪುಸ್ತಕವನ್ನು ಹಾಜರುಪಡಿಸುವಂತೆ ಅಥವಾ ಅದರಲ್ಲಿ ದಾಖಲಿಸಿದ ವಿಷಯಗಳನ್ನು, ವ್ಯವಹಾರಗಳನ್ನು ಮತ್ತು ಲೆಕ್ಕಗಳನ್ನು ರುಜುವಾತುಪಡಿಸಲು ಸಾಕ್ಷಿಯಾಗಿ ಹಾಜರಾಗುವಂತೆ ಬ್ಯಾಂಕಿನ ಯಾರೇ ಅಧಿಕಾರಿಯನ್ನು ಒತ್ತಾಯಿಸತಕ್ಕದ್ದಲ್ಲ.

**6. ನ್ಯಾಯಾಲಯದ ಅಥವಾ ನ್ಯಾಯಾಧೀಶನ ಆದೇಶದ ಮೂಲಕ ಪುಸ್ತಕಗಳ ಪರಿಶೀಲನೆ.**– (1) ಕಾನೂನು ವ್ಯವಹರಣೆಯಲ್ಲಿನ ಯಾರೇ ಪಕ್ಷಕಾರನ ಅರ್ಜಿಯ ಮೇಲೆ, ನ್ಯಾಯಾಲಯವು ಅಥವಾ ನ್ಯಾಯಾಧೀಶನು, ಅಂಥ ಪಕ್ಷಕಾರನು ಅಂಥ ವ್ಯವಹರಣೆಯ ಯಾವುದೇ ಉದ್ದೇಶಗಳಿಗಾಗಿ ಬ್ಯಾಂಕರ್‌ನ ಪುಸ್ತಕದ ಯಾವುದೇ ನಮೂದನ್ನು ಪರಿಶೀಲನೆ ಮಾಡಲು ಮತ್ತು ಅದರ ಪ್ರತಿಗಳನ್ನು ತೆಗೆದುಕೊಳ್ಳಲು ಅವನು ಸ್ವತಂತ್ರನಿದ್ದಾನೆಂದು ಆದೇಶಿಸಬಹುದು ಅಥವಾ ಆ ಆದೇಶದಲ್ಲಿ ನಿರ್ದಿಷ್ಟಪಡಿಸುವ ಕಾಲಾವಧಿಯೊಳಗಾಗಿ, ಅಂಥ ವ್ಯವಹರಣೆಯಲ್ಲಿನ ವಿವಾದಾಂಶಗಳ ವಿಷಯಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನ ಪುಸ್ತಕಗಳಲ್ಲಿ ಬೇರೆ ಯಾವುದೇ ನಮೂದುಗಳು ಕಂಡುಬರುತ್ತಿಲ್ಲವೆಂಬ ಒಂದು ಹೆಚ್ಚಿನ ಪ್ರಮಾಣ ಪತ್ರದೊಂದಿಗೆ ಅಂಥ ಎಲ್ಲ ನಮೂದುಗಳ ಪ್ರಮಾಣಿತ ಪ್ರತಿಗಳನ್ನು ತಯಾರಿಸುವಂತೆ ಮತ್ತು ಹಾಜರುಪಡಿಸುವಂತೆ ಬ್ಯಾಂಕಿಗೆ ಆದೇಶಿಸಬಹುದು ಮತ್ತು ಪ್ರಮಾಣಿತ ಪ್ರತಿಗಳಿಗೆ ಸಂಬಂಧಿಸಿ ಈ ಹಿಂದೆ ನಿರ್ದೇಶಿಸಿರುವ ರೀತಿಯಲ್ಲಿ ಅಂಥ ಹೆಚ್ಚಿನ ಪ್ರಮಾಣಪತ್ರಕ್ಕೆ ದಿನಾಂಕದ ಸಹಿತ ರುಜುಮಾಡತಕ್ಕದ್ದು.

(2) ಬ್ಯಾಂಕಿಗೆ ಸಮನ್ಸ್ ಜಾರಿ ಮಾಡಿ ಅಥವಾ ಸಮನು ಮಾಡದೆಯೇ ಈ ಪ್ರಕರಣ ಅಥವಾ ಈ ಹಿಂದಿನ ಪ್ರಕರಣದ ಮೇರೆಗೆ ಆದೇಶವನ್ನು ಮಾಡಬಹುದು ಮತ್ತು ನ್ಯಾಯಾಲಯವು ಅಥವಾ ನ್ಯಾಯಾಧೀಶನು ಅನ್ಯಥಾ ನಿರ್ದೇಶಿಸಿರುವ ಹೊರತು ಆದೇಶವನ್ನು ಪಾಲಿಸಲು ಮೂರು ಪೂರ್ಣ ದಿನಗಳ ಮುಂಚೆ (ಬ್ಯಾಂಕಿನ ರಜಾ ದಿನಗಳನ್ನು ಹೊರತುಪಡಿಸಿ) ಬ್ಯಾಂಕಿಗೆ ಸಮನು ಜಾರಿ ಮಾಡತಕ್ಕದ್ದು.

(3) ಮೇಲೆ ಹೇಳಲಾದ ಅಂಥ ಯಾವುದೇ ಆದೇಶವನ್ನು ಪಾಲಿಸಲು ನಿಗದಿಪಡಿಸಿದ್ದ ಸಮಯಕ್ಕಿಂತ ಮುಂಚೆ ಯಾವುದೇ ಕಾಲದಲ್ಲಿ ಅಧಿವಿಚಾರಣೆಯ ಸಂದರ್ಭದಲ್ಲಿ ತನ್ನ ಪುಸ್ತಕಗಳನ್ನು ಹಾಜರುಪಡಿಸುತ್ತೇನೆಂದು ಬ್ಯಾಂಕು ಹೇಳಬಹುದು ಅಥವಾ ಅಂಥ ಆದೇಶವನ್ನು ಪಾಲಿಸಲಾಗದ ಬಗ್ಗೆ ಕಾರಣ ತೋರಿಸುವ ತನ್ನ ಉದ್ದೇಶದ ನೋಟೀಸು ನೀಡಬಹುದು ಮತ್ತು ಆ ತರುವಾಯ ಮುಂದಿನ ಆದೇಶ ಮಾಡದೆಯೇ ಅವನ್ನು ಹಾಜರುಪಡಿಸುವಂತೆ ಒತ್ತಾಯಪಡಿಸತಕ್ಕುದಲ್ಲ.

**7. ಖರ್ಚುಗಳು.**– (1) ಈ ಅಧಿನಿಯಮದ ಮೇರೆಗೆ ಅಥವಾ ಅದರ ಉದ್ದೇಶಗಳಿಗಾಗಿ ನ್ಯಾಯಾಲಯಕ್ಕೆ ಅಥವಾ ನ್ಯಾಯಾಧೀಶನಿಗೆ ಮಾಡಿಕೊಂಡ ಯಾವುದೇ ಅರ್ಜಿಯ ಖರ್ಚುಗಳು ಮತ್ತು

ಈ ಅಧಿನಿಯಮದ ಮೇರೆಗೆ ಅಥವಾ ಅದರ ಉದ್ದೇಶಗಳಿಗಾಗಿ ನ್ಯಾಯಾಲಯವು ಅಥವಾ ನ್ಯಾಯಾಧೀಶನು ಮಾಡಿದ ಆದೇಶದ ಮೇರೆಗೆ ಮಾಡಿರುವ ಅಥವಾ ಮಾಡಬೇಕಾಗಿರುವ ಯಾವುವೇ ಖರ್ಚುಗಳು ನ್ಯಾಯಾಲಯದ ಅಥವಾ ನ್ಯಾಯಾಧೀಶನ ವಿವೇಚನೆಗೆ ಒಳಪಟ್ಟಿರತಕ್ಕದ್ದು. ಅಲ್ಲದೆ, ಬ್ಯಾಂಕಿನಿಂದ ಆಗಿರುವ ಯಾವುದೇ ತಪ್ಪು ಅಥವಾ ಅನುಚಿತ ವಿಳಂಬದ ಕಾರಣದಿಂದಾಗಿ ಖರ್ಚುಗಳನ್ನು ವಹಿಸಿದ್ದರೆ ಯಾರೇ ಪಕ್ಷಕಾರನಿಗೆ ಅಂಥ ಖರ್ಚುಗಳನ್ನು ಅಥವಾ ಅದರ ಯಾವುದೇ ಭಾಗವನ್ನು ಬ್ಯಾಂಕು ಸಂದಾಯ ಮಾಡಬೇಕೆಂದು ಹೆಚ್ಚಿನ ಆದೇಶವನ್ನು ಮಾಡಬಹುದು.

(2) ಖರ್ಚುಗಳನ್ನು ಬ್ಯಾಂಕಿಗೆ ಸಂದಾಯ ಮಾಡುವಂತೆ ಅಥವಾ ಅವುಗಳನ್ನು ಬ್ಯಾಂಕು ಸಂದಾಯ ಮಾಡುವಂತೆ ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು, ಬ್ಯಾಂಕು ಅಂಥ ವ್ಯವಹರಣೆಗೆ ಒಂದು ಪಕ್ಷವಾಗಿದ್ದಿದ್ದರೆ ಹೇಗೋ ಹಾಗೆ ಜಾರಿಗೊಳಿಸಬಹುದು.

(3) ಖರ್ಚುಗಳನ್ನು ಸಂದಾಯ ಮಾಡುವಂತೆ ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು, ಆ ಆದೇಶದಲ್ಲಿ ಗೊತ್ತುಪಡಿಸಿರುವ ಸಿವಿಲ್ ಅಧಿಕಾರ ವ್ಯಾಪ್ತಿಯುಳ್ಳ ಯಾವುದೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಮೇಲೆ, ಅಂಥ ನ್ಯಾಯಾಲಯವು, ಆ ಆದೇಶವು ಹಣ ಸಂದಾಯಕ್ಕಾಗಿ ತಾನೇ ಮಾಡಿದ ಡಿಕ್ರಿಯಾಗಿದ್ದಿದ್ದರೆ ಹೇಗೋ ಹಾಗೆ ಆ ಆದೇಶವನ್ನು ಜಾರಿಗೊಳಿಸತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಖರ್ಚುಗಳ ಸಂದಾಯಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಅಥವಾ ನ್ಯಾಯಾಧೀಶನ ನಿರ್ದೇಶನಗಳನ್ನು ಜಾರಿಗೊಳಿಸುವುದಕ್ಕಾಗಿ ಆದೇಶ ಮಾಡುವ ನ್ಯಾಯಾಲಯವು ಅಥವಾ ನ್ಯಾಯಾಧೀಶನು ಹೊಂದಿರಬಹುದಾದ ಯಾವುದೇ ಅಧಿಕಾರವನ್ನು ಅಲ್ಪೀಕರಿಸುವುದೆಂದು ಅರ್ಥೈಸತಕ್ಕುದಲ್ಲ.

**8. ನ್ಯಾಯಾಲಯದ ಆದೇಶವನ್ನು, ನಿರ್ದಿಷ್ಟಪಡಿಸಿದ ಅಧಿಕಾರಿಯು ಮಾಡಿದ ಆದೇಶವೆಂಬುದಾಗಿ ಅರ್ಥೈಸುವುದು.**- 2ನೇ ಪ್ರಕರಣದ (4)ನೇ ಖಂಡದ (iii)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ತನಿಖೆ ಅಥವಾ ವಿಚಾರಣೆಗೆ 5,6 ಮತ್ತು 7ನೇ ಪ್ರಕರಣಗಳನ್ನು ಅನ್ವಯಿಸುವಲ್ಲಿ, ಆ ಪ್ರಕರಣಗಳಲ್ಲಿ ಉಲ್ಲೇಖಿಸಿದ ನ್ಯಾಯಾಲಯದ ಅಥವಾ ನ್ಯಾಯಾಧೀಶನ ಆದೇಶವನ್ನು, ಸಮುಚಿತ ಸರ್ಕಾರವು ಈ ಸಂದರ್ಭದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪೊಲೀಸ್ ಸೂಪರಿಂಟೆಂಡೆಂಟ್‌ನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ಮಾಡಿದ ಆದೇಶಕ್ಕೆ ಮಾಡಲಾದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**ವಿವರಣೆ:**- ಈ ಪ್ರಕರಣದಲ್ಲಿ "ಸಮುಚಿತ ಸರ್ಕಾರ" ಎಂದರೆ, ಯಾವುದೇ ತನಿಖೆ ಅಥವಾ ವಿಚಾರಣೆಯನ್ನು ನಡೆಸುವುದಕ್ಕಾಗಿ ಪೊಲೀಸ್ ಅಧಿಕಾರಿಯನ್ನು ಅಥವಾ ಯಾರೇ ಇತರ ವ್ಯಕ್ತಿಯನ್ನು ನಿಯೋಜಿಸುವ ಸರ್ಕಾರ.

* * *